**ಅಸಲು ದಾವೆ ನಂ. 59/2023**

**ಪಿ.ಡಬ್ಲೂಃ 1**

**<u>ಇಂದು ದಿನಾಂಕ 25.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯ ನನ್ನ ತಿಳುವಳಿಕೆ ಮಟ್ಟಿಗೆ ನಿಜವಿರತ್ತದೆ ನಾನು ಓದಿ ತಿಳಿದುಕೊಂಡು ಅದನ್ನು ನಾನು ನನ್ನ ಸಹಿ ಹಾಕಿರುತ್ತೇನೆ.

**ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ**

ಪ್ರತಿವಾದಿಯರು ಬರೆದುಕೊಟ್ಟ ಒಂದು ಕ್ರಯದ ಕರಾರು ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ 1 ಎಂದು ಗುರುತಿಸಲಾಯಿತು. ನಿ.ಪಿ 1 ಕ್ಕೆ ಸಯ್ಯದ ಬಾಶ್ಯಾ ಕೊಯಿರ, ಶ್ರೀಕೃಷ್ಣ ಬೀರಪ್ಪ ಪೂಜಾರಿರವರು ಸಾಕ್ಷಿ ಎಂದು ಸಹಿ ಮಾಡಿದ್ದಾರೆ. 1 ನೇ ಪ್ರತಿವಾದಿಯ ಹೆಂಡತಿ ತಾನು ಸಹ ಜಬಾವ್ದಾರಿ ಇದ್ದೇನೆ ಎಂದು ಹೇಳಿ ನಿ.ಪಿ 1 ಕ್ಕೆ ಸಹಿ ಮಾಡಿದ್ದಾರೆ. ಅದೇ ರೀತಿ ಪ್ರಕಾಶ ಹರಿಜನರವರು ಸಹಿ ಮಾಡಿದ್ದಾರೆ. ನಾನು ಸಹ ಅದಕ್ಕೆ ಸಹಿ ಮಾಡಿದ್ದೇನೆ. ಸಾಕ್ಷಿಯು ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ–1–ಎ ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಸಹಿ ಮಾಡಿದ್ದಾನೆ ಮತ್ತು 2 ನೇ ಪ್ರತಿವಾದಿ ಹೆಬ್ಬೆಟಿನ ಸಹಿ ಮಾಡಿದ್ದಾನೆ. ಸಾಕ್ಷಿಯು ಪುನಃ ಎರಡೂ ಜನ ಪ್ರತಿವಾದಿಯರು ಹೆಬ್ಬೆಟಿನ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ 61/1ರ 2 ಪಹಣಿಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ 2 ಮತ್ತು 3 ಎಂದು ಗುರುತಿಸಲಾಯಿತು. ಸರ್ವೆ ನಂ 61/8 ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ 4 ಎಂದು ಗುರುತಿಸಲಾಯಿತು. ಸರ್ವೆ ನಂ 61/1ರ 2 ಪಹಣಿಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ 5 ಮತ್ತು 6 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ನಮ್ಮ ವಕೀಲರ ಮೂಲಕ ನೀಡಿದ ನೋಟಿಸಿನ ಕಚೇರಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ 7 ಎಂದು ಗುರುತಿಸಲಾಯಿತು. 2 ಟ್ರ್ಯಾಕ ಕಂಸಾಯಮೆಟಗಳನ್ನು ಹಾಜರುಪಡಿಸಿದ್ದೇನೆ.

ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದ ಪ್ರತಿವಾದಿಯರು ಗೈರು ಹಾಜರಿದ್ದರಿಂದ ಪಾಟೀಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ.
ಇಂಡಿ.